Regd No M 1299 SATYAVADI Founded 1917

The Oldest Newspaper of Mysore

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 32 ಸಂಚಿಕೆ 77] ಶುಕ್ರವಾರ 24—12—48 [ಬಿಡಿ ಪ್ರತಿ 3 ಪೈ

ಇಂದಿನಿಂದ ಪಾಕೇಸ್ತಾನದ ಮೇಲೆ ಡಚ್ ವಿಮಾನ ಹಾರಕೂಡದು

ಸುದ್ದಿಗಳು

ಮುಷ್ಕರವಿಲ್ಲ

ಕಾರ್ಮಿಕ ಸಂಘದ ನಾಯಕರ ಸಲಹೆ ಮೇರೆ ಜವಾನಿನಲ್ಲಿ 12 ಲಕ್ಷ ಮಂದಿ ಕಾರ್ಮಿಕರು ಮುಷ್ಕರ ನಿಲ್ಲಿಸಿದರು.

ದಿವಾಕರರ ಆಗಮನ

ಕೇಂದ್ರ ಸರ್ಕಾರ ಸಚಿವ ಶ್ರೀ ದಿವಾಕರರು 26 ನೇ ತಾರೀಖು ಬೆಳಿಗ್ಗೆ ಮದರಾಸಿನಿಂದ ಬೆಂಗಳೂರಿಗೆ ಬಂದು ಪಂ॥ ನೆಹರು ಪ್ರವಾಸದಲ್ಲಿ ಭಾಗವಹಿಸುವರು.

ರಾಮ್ ವರ್ಧಂತಿ

ಇದೇ ತಾ | 26 ರಲ್ಲಿ ಬೆಂಗಳೂರು ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಬೆಳಿಗ್ಗೆ 9.30 ಗಂಟೆಗೆ ಇಂಡಿಯನ್ ಅಕಾಡೆಮಿ ಆಫ್ ಸೈನ್ಸ್ 14 ನೇ ವಾರ್ಷಿಕೋತ್ಸವ ಮತ್ತು ರಾಮ್ 60 ನೇ ವರ್ಧಂತ್ಯುತ್ಸವ ದಿವಾಕರ್ ಅಕಾರ್ಡಟ ಅಧ್ಯಕ್ಷತೆಯಲ್ಲಿ ಜರಗುವುದು.

ಕಳವಳವಿಲ್ಲ

ಚಿತ್ರದುರ್ಗ ಜಿಲ್ಲೆಯಲ್ಲಿ ಆಹಾರಕ್ಕೆ ಕಳವಳವಿಲ್ಲ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಸ್ತಂಭ ನಿರ್ಮಾಣ

ನಿನ್ನೆ ದಿನಸ ಬೆಳಿಗ್ಗೆ 10 ಗಂಟೆಯಲ್ಲಿ ಬೆಂಗಳೂರು ಸುಭಾಷ್ ನಗರದಲ್ಲಿ ಕಾಂಗ್ರೆಸ್ ವಸ್ತು ಪ್ರದರ್ಶನ ನಡೆಯುವ ಸ್ಥಳದಲ್ಲಿ ಶಾಸ್ತ್ರೋಕ್ತವಾಗಿ 65 ಅಡಿ ಎತ್ತರದ ಗ್ನಜ ಸ್ತಂಭ ನಿರ್ಮಿಸಲಾಯಿತು

ಮೈಸೂರು ಸ್ಟೇಟ್ ವೀರಶೈವ ಅಸೋಸಿಯೇಷನ್ ಸಭೆ

ತಾ | 25—12—48 ನೇ ಶನಿವಾರ ಸಾಯಂಕಾಲ 4 ಗಂಟೆಗೆ ಮೇಲ್ಕಂಡ ಸಂಘದ ವಿಶೇಷ ಸಭೆಯು ಅರಳೇಪೇಟೆ ನಂ. 115 ನೇ ಸಂಘದ ಕಾರ್ಯಾಲಯದಲ್ಲಿ ಜರುಗುತ್ತದೆ. ಹೈಕೋರ್ಟಿನ ಶ್ರೀಷ್ಟ ನ್ಯಾಯಾಧೀಶರ ನಿವೃತ್ತಿ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ರಾಜಧಾನಿಯಲ್ಲಿ ಏಪ್ರಿಲ್ ತಿಂಗಳಲ್ಲಿ ಸೇರಿಸುವ ವಸ್ಥೆರೆ ಅನೇಕ ಮಹತ್ವದ ವಿಚಾರಗಳಿರುವುದರಿಂದ, ಸದಸ್ಯರೆಲ್ಲರೂ ಆ ಹ್ವಾನಿಸಲು ಕೋರಿದ್ದಾರೆ. ಇದೇ ಆಹ್ವಾನವನ್ನು ಭಾವಿಸಿ, ತಪ್ಪದೆ ದಯವಿಟ್ಟು ಹಾಜರಾಗಬೇಕಾಗಿ ವಿನಂತಿ ಎಂದು ಶ್ರೀ ಎಚ್. ಪುಟ್ಟವೀರಯ್ಯ ತಿಳಿಸುತ್ತಾರೆ.

ದಸ್ತಗಿರಿ

ಭಾಷಣದಲ್ಲಿ ಇದುವರೆಗೆ 20 ಸಾವಿರ ಮಂದಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸತ್ಯಾಗ್ರಹಿಗಳು ದಸ್ತಗಿರಿಯಾಗಿದ್ದಾರೆ

ಸತ್ತರು

ಸಾವಿರಾರು ಮಂದಿ ಪಾಂಗ್ಯೆ ಸೆಂಟ್ರಲ್ ಜೀಕಿನಿಂದ ಚಿನ್ನದ ಗಟ್ಟಿ ಬೆಳ್ಳಿ ಡಾಲರ್ ಕೊಳ್ಳಲು ನುಗ್ಗಿದಾಗ 6 ಮಂದಿ ಸತ್ತರು.

ವಾರ್ತೆಗಳು

ಮೈಸೂರು ವಿಶ್ವವಿದ್ಯಾಲಯ ಸಮಿತಿಗೆ ಈ ಕೆಳಗೆ ಕಂಡವರು ನಾಮಕರಣ ಮಾಡಲ್ಪಟ್ಟಿದ್ದಾರೆ — ಶ್ರೀಗಳಾದ ಕೆ ಆರ್. ಮಾಧವರಾವ್, ಟಿ. ವೀರಬಸಪ್ಪ, ಎಸ್. ಎಂ. ಸಿದ್ಧಯ್ಯ, ಬೆಂಗಳೂರು ಮೆಡಿಕಲ್ ಸ್ಕೂಲ್ ಪ್ರಿನ್ಸಿಪಾಲ್, ಮತ್ತು ಶ್ರೀ ಚಾಮರಾಜೇಂದ್ರ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್ ಸೂಪರಿಂಟಿಂಡೆಂಟ್.

ಮೈಸೂರು, ಡಿ 23 — ಭಾರತ ರಕ್ಷಣಾ ಶಾಸನ ರೀತ್ಯ ಹೆಚ್ಚು ಆಹಾರ ಧಾನ್ಯ ಶೇಖರಿಸಿಟ್ಟಿದ್ದರೆಂಬ ಆಪಾದನೆ ಮೇಲೆ ಧರ್ಮ ಪತ್ನಿಕರ ಸಂದೀಪಸಪ್ಪ ಅಪರ ಪುತ್ರ ಚಂದ್ರಶೇಖರಪ್ಪ ಮತ್ತು ತಿಮ್ಮಣ್ಣ ಇವರ ಮೇಲೆ ನ್ಯಾಯಾಸ್ಥಾನದಲ್ಲಿ ಮೊಕದ್ದಮೆ ಹೂಡಲಾಯಿತು

ನವದೆಹಲಿ, ಡಿ 23 — ನವದೆಹಲಿ ಡಚ್ ರಾಯಭಾರಿ ಕಚೇರಿ ಮುಂದೆ ದೆಹಲಿ ಕಾಲೇಜು ವಿದ್ಯಾರ್ಥಿಗಳು ಇಂಡೋನೇಷ್ಯದ ಬಗ್ಗೆ ಸಹಾನುಭೂತಿ ಪ್ರದರ್ಶನ ಮಾಡಿದರು. ನೂರು ಮಂದಿ ವಿದ್ಯಾರ್ಥಿಗಳು ದಸ್ತಗಿರಿಯಾದರು.

ಜಪಾನಿನಲ್ಲಿ ಮಹಾಚುನಾವಣೆ ನಡೆಯಲು ಸ್ಥಳಾನಿ ಪಿಗಟು ಯೋಷಿಡ ಆಜ್ಞೆಯಿತ್ತಿದ್ದಾರೆ.

ವಾರ್ತೆಗಳು

ನವದೆಹಲಿ, ಡಿ 23 — ಡಚ್ಚರ ಕೆಎಲ್ ಎಂ ವಿಮಾನಗಳು ಭಾರತ ಮೂಲಕ ಹಾರಕೂಡದೆಂದು ಕೇಂದ್ರ ಸರ್ಕಾರ ಆಜ್ಞೆ ಮಾಡಿದೆ.

ಕರಾಚಿ, ಡಿ 23 — ಡಚ್ ವಿಮಾನ ರಹದಾರಿಯನ್ನು 24 ತಾ || ಮಧ್ಯಾಹ್ನ 1 ಗಂಟೆಯಿಂದ ರದ್ದುಪಡಿಸಿರುವುದಾಗಿ ಪಾಕೀಸ್ತಾನ ಪಾರ್ಲಿಮೆಂಟಿನಲ್ಲಿ ಸರ್ ಜಫರುಲ್ಲ ತಿಳಿಸಿದರು.

ಸ್ಯಾರಿಸ್, ಡಿ 23 — ಹಾಲೆಂಡಿನಲ್ಲಿ ಹಿಟ್ಲರ್ ಎಸೆಗಿದ ಕೃತ್ಯಕ್ಕಿಂತ ಇಂಡೋನೇಷ್ಯದಲ್ಲಿ ಡಚ್ಚರ ಕೃತ್ಯ ಭಯಂಕರವಾದುದೆಂದು ವಿಶ್ವಸಂಸ್ಥೆಯಲ್ಲಿ ಆಸ್ಟ್ರೇಲಿಯ ಪ್ರತಿನಿಧಿ ತಿಳಿಸಿದ್ದಾರೆ

ಬರ್ಮಾ ಭೂ ರಾಷ್ಟ್ರೀಕರಣದಿಂದ ಸುಮಾರು 2 ಲಕ್ಷ ಭಾರತೀಯರು ನಿರುದ್ಯೋಗಿಗಳಾಗುವರೆಂದು ಹೆದರಲಾಗಿದೆ ಇವರಲ್ಲಿ ಬಹುಮಂದಿ ಮದ್ರಾಸಿಗರು

ನಿಜಾಮರು ತಮ್ಮ ವೈಚ್ಚಕ್ಕಾಗಿ ಈಗಿನ ಅರ್ಧದಷ್ಟು ಹಣ ತೆಗೆದುಕೊಳ್ಳುವದಾಗಿ ಒಪ್ಪಿದ್ದಾರೆಂದು ತಿಳಿದುಬಂದಿದೆ.

ಮೈಸೂರು ಪೌರಸಭೆ ಉಪಾಧ್ಯಕ್ಷರಾಗಿ ಶ್ರೀ ಟಿ. ನರಸಿಂಹಯ್ಯಂಗಾರ್ಯರು ಚುನಾಯಿತರಾಗಿರುವುದನ್ನು ಸರ್ಕಾರ ಅಂಗೀಕರಿಸಿದೆ

ವಿವಿಧ ವರ್ತಮಾನ

ಅಧ್ಯಕ್ಷರ ಪತ್ರ

ಬೆಂಗಳೂರು ನಾಗರೀಕರಿಗೆ ನೆಹ್ರು ದರ್ಶನ ಕಲ್ಪಿಸಬೇಕೆಂದು ಪೌರಸಭಾಧ್ಯಕ್ಷರು ಶ್ರೀ ಕೆ ಸಿ. ರೆಡ್ಡಿಗೆ ಪತ್ರಬರೆದಿದ್ದಾರೆ.

ಟ್ರಾಂ ಮುಷ್ಕರ ಮುಗಿಯಿತು

ಕಲ್ಕತ್ತಾ ಟ್ರಾಂ ಮುಷ್ಕರ ನಿಂತಿತು ಟ್ರಾಂಗಳ ಮೇಲೆ ಬಾಂಬು ಬಿದ್ದುದರಿಂದ ಕಾಳೇಫಾಟು ಮತ್ತು ಶಾಮುಬಜಾರಿನಲ್ಲಿ ಓಡಾಟ ನಿಂತಿದೆ.

ಗಂಟೆಗೆ ಐನೂರು ಮೈಲಿ

ಅಮೇರಿಕ ಜೆಟ್ ವಿಮಾನವೊಂದು ಗಂಟೆಗೆ ಐನೂರು ಮೈಲು ಪ್ರಯಾಣ ಮಾಡಿತು.

ಕರೆ ಹೋಯಿತು

ಹೈದರಾಬಾದಿಗೆ ಶಸ್ತ್ರಾಸ್ತ್ರ ಸಾಗಿಸುತ್ತಿದ್ದ ಸಿಡ್ನಿ ಕಾಟನ್ನಿಗೆ ಲಂಡನ್ ನೌಕಾ ಇಲಾಖೆ ಸರ್ಕಾರ ಜಾರಿ ಮಾಡಿದೆ.

ಶಾಂತಿಯಿದೆಯಂತೆ

ಇಂಡೋನೇಷಿಯಾದಲ್ಲಿ ಸರ್ವಶಾಂತಿಯಿದೆಯೆಂದು ಅಮೇರಿಕಾದಲ್ಲಿರುವ ಡಚ್ ರಾಯಭಾರಿ ವಾರ್ತೆಫೆನ್ಸ್ ತಿಳಿಸಿರುವುದಾಗಿ ವಾಷಿಂಗ್ಟನ್ ವರದಿ.

ಬಿಕ್ಕಟ್ಟು

ಹೈದರಾಬಾದಿನಲ್ಲಿ ಕಾಂಗ್ರೆಸಿನ ಎರಡು ಪಕ್ಷಗಳೂ ಸದಸ್ಯರನ್ನು ಕೂಡಿಸಲು ಬಿರುಸಾಗಿ ಕಾರ್ಯ ಮಾಡುತ್ತಿದ್ದಾರೆ ನೆಹರು ಭೇಟಿಯಿತ್ತಾಗ ಬಿಕ್ಕಟ್ಟು ಪರಿಹಾರವಾಗುವ ನಿರೀಕ್ಷೆಯಿದೆ.

ಅಕ್ಕಿ ಬಂತು

ನಿನ್ನೆ ಮದರಾಸಿನ ಬಂದರಿಗೆ ಬಂದ 1500 ಟನ್ನು ಬ್ರೆಜಿಲ್ಲಿನ ಅಕ್ಕಿ ಮೈಸೂರಿಗೆ ಬರಲಿದೆ.

ಪ್ರತಿನಿಧಿಗಳು

ಜನವರಿ 3 ರಲ್ಲಿ ನಡೆಯುವ ಇಂಡಿಯನ್ ಸೈನ್ಸ್ ಕಾಂಗ್ರೆಸ್‌ಗೆ ಮೈಸೂರಿನ ಪ್ರತಿನಿಧಿಗಳು :— ಡಾ | ಎಲ್. ಎಸ್. ರಾಮಸ್ವಾಮಿ, ಶ್ರೀಮತಿ ಸ್ನೇಹಲತಾ ನಿರ್ಮಲ ಕುಮಾರಿ ಶ್ರೀಮತಿ ಸುಶೀಲಾಥಿಯೋಫೆಲಿಸ್ ಮತ್ತು ಡಾ॥ ಅಪ್ಪಾಜಿ

— ನೀತಿವಾಕ್ಯ —

ಕೋಪವು ಪ್ರಾಣಾಪಹಾರಕ ಶತ್ರು; ಅಮಿತ್ರ ಮುಖಧಾರಿ ಶತ್ರು, ತೀಕ್ಷ್ಣವಾದ ಖಡ್ಗವು, ಎಲ್ಲಾ ವಿಧದಲ್ಲಿಯೂ ಪತನಕಾರಿಯು, ತಪಸ್ಸು, ಸಂಯಮ ಪುಣ್ಯ ದಾನವನ್ನು ಹರಣಮಾಡುತ್ತದೆ ಆದ್ದರಿಂದ ಕೋಪವನ್ನು ಬಿಡಬೇಕು.

(ವಾಲ್ಮೀಕಿ ರಾಮಾಯಣ)

ಂ ಂ

ಸಾರವತ್ತಾದ ಗ್ರೀಸ್ ಗಾದೆ

'ಒಬ್ಬ ಮನುಷ್ಯನ ಒಳ್ಳೆಯ ಮತ್ತು ಕೆಟ್ಟ ನಡತೆಗಳನ್ನು ಪರೀಕ್ಷಿಸಬೇಕಾಗಿದ್ದಲ್ಲಿ ಅವನಿಗೆ ಸ್ವಲ್ಪ ರಾಜಕೀಯ ಅಧಿಕಾರವನ್ನು ಕೊಟ್ಟು ನೋಡು' ಎಂಬುದು ಗ್ರೀಸ್ ದೇಶದ ನಾಣ್ಣುಡಿಗಳಲ್ಲಿ ಒಂದಾಗಿದೆ. ಇದರ ಅಭಿಪ್ರಾಯವೇನೆಸ್ಸುವಿರಾ? ಒಬ್ಬ ಮನುಷ್ಯನಿಗೆ ಸ್ವಲ್ಪ ಅಧಿಕಾರವು ಹಸ್ತಗತವಾಗುತ್ತಲೂ, ಆತನು ತಾನು ಸರ್ವಜ್ಞನೆಂದಂದುಕೊಳ್ಳುತ್ತಾ, ಇತರರನ್ನು ಅಲ್ಪರೆಂದು ಭಾವಿಸುವನೆಂದೂ, ಹಾಗೆ ಆತನು ಪ್ರವರ್ತಿಸಿದಲ್ಲಿ ಆತನ ವೆಂದಳಿನ ಬೆಲೆಯು ಎಷ್ಟೆಂಬುದು ವಿದಿತವಾಗುವುದೆಂದೂ ಅರ್ಥವು

ಂ ಂ

ಸ್ವಾರಸ್ಯವಾದ ಫ್ರೆಂಚು ನಾಣ್ಣುಡಿ

'ನಿನ್ನ ಪ್ರತ್ಯರ್ಥಿಯನ್ನು ಸೋಲಿಸಬೇಕಾಗಿದ್ದಲ್ಲಿ ಆತನು ಒಬ್ಬ ಅಧಿಕಾರಿಯಾಗುವಂತೆ ಮಾಡು' ಎಂಬುದ ಫ್ರೆಂಚರ ನಾಣ್ಣುಡಿಗಳಲ್ಲಿ ಒಂದು. ಇದರ ಅರ್ಥವೇನೆಂದರೆ— ನೀನು ನಿನ್ನ ವಿರೋಧಿಯನ್ನು ವಂಚಿಸಲು ಇಚ್ಛಿಸಿದರೆ ಆತನಿಗೆ ಅಧಿಕಾರ ಸ್ಥಾನವನ್ನು ಒಟ್ಟು ಕೊಡು ಎಂಬುದರ ಭಾವವು ಏನೆಂದರೆ— ಅಧಿಕಾರಿಯಾಗಿ ಆತನು ಹುಚ್ಚು ಹುಚ್ಚಾಗಿ ಕೆಲಸವನ್ನು ಅಧಿಕಾರ ದುರ್ಬಳಕೆ ಮಾಡಲಾರಂಭಿಸಿದಾಗ ಆತನು ಪ್ರಜೆಗಳ ಅಭಿಮಾನವನ್ನು ಕಳೆದುಕೊಳ್ಳುವನು: ಪ್ರಜೆಗಳೊಂದಿಗೆ ಇದ್ದುಕೊಂಡು ನಾಲ್ಕು ಸ್ವಲ್ಪ ದುಷ್ಪ್ರಚಾರವನ್ನು ನಡೆಸಿದ ಕೂಡಲೇ ಆತನ ಪತನವಾಗುವುದು: ಪುನಃ ತನ್ನ ಜೀವಮಾನದಲ್ಲಿ ಮೇಲಕ್ಕೇಳಲಾಗುವುದಿಲ್ಲ; ಎದ್ದರೂ ಸಂತೋಷಕೊಳ್ಳಲಾರನು. ಇದು ಫ್ರೆಂಚ್ ನಾಣ್ಣುಡಿಯ ಗೂಢಾರ್ಥ.

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ ಆರು ಆಣೆ

ವುಡ್‌ಲ್ಯಾಂಡ್ಸ್

24—12—48 ರಿಂದ

— ಬೆಳಗಿನ ಪ್ರದರ್ಶನ —

Azad Jeevan

ಆಜಾದ್ ಜೀವನ್

ಹರಿಶ್ಚಂದ್ರರಾವ್, ಅಟಿಕ, ನಟಸಿರುವ ಸಂಗೀತ, ನೃತ್ಯ, ಭಾರಿಭಾರಿ ಹೊಡೆದಾಟದಿಂದ ಕೂಡಿರುವ ಸುಂದರ ಹಿಂದಿ ಚಿತ್ರ

ಮೈಸೂರಿನಲ್ಲಿ ಪ್ರಥಮ ಪ್ರದರ್ಶನ

ಈ ಚಿತ್ರಕ್ಕೆ ಕಾಸೆರ್ವರದಂ ಇಲ್ಲ.

Woodlands

ಯಶಸ್ವಿ 2 ನೇ ವಾರ

14 ನೇ ಒಲಂಪಿಯಾಡ್

ಲಂಡನ್ನಿನಲ್ಲಿ ನಡೆದ ಲೋಕಪ್ರಖ್ಯಾತ ಅಂತರರಾಷ್ಟ್ರೀಯ ಒಲಂಪಿಕ್ ಆಟಗಳ ಆದ್ಯಂತ, ರೋಮಾಂಚದಾಯಕ ಮನೋಹರ ವರ್ಣರಂಜಿತ ಚಿತ್ರ:

ಪ್ರತಿ ದಿನ 3 ಪ್ರದರ್ಶನಗಳು

University of Mysore

No. Ex 2. 526 / 48-49

Office of the University of Mysore, Mysore
Dated 21 December 1948

NOTIFICATION

In continuation of this office Notification No. Ex. 2. 526 / 48/49 dated 25-11-1948, it is hereby informed that the last date for receipt of applications in respect of Intermediate and Degree Examinations of March 1949 by the Heads of Colleges is extended to Monday the 3rd January 1949 (inclusive).

By Order
D. S. Gordon
Registrar

Protect the Cow

ಗೋ ರಕ್ಷಣೆ ನಡೆಯಲಿ

Edited, Printed and Published by M S Krishna Rao at the Satyavadi Press, Chamarajpuram Mysore

SHAKTI SUDHA

A Superb Tonic

ಶಕಿ ಸುಧಾ

— ಫಸ್ಟ್ ಕ್ಲಾಸ್ ಟಾನಿಕ್ —

ಧಾತು ಪುಷ್ಟಿ, ರಕ್ತವೃದ್ಧಿ, ದೇಹ ಸೌಂದರ್ಯ ಹೆಚ್ಚಿಸುವುದು

At Opera ಅಮೋಘ 3 ನೇ ವಾರ

ಮೋಹಿನಿ